ದಿಃ **06-11-2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ **No.3** ಮತ್ತು **4** ರ ಪರ ಶ್ರೀ. **SHC** ವಕೀಲರವರಿಂದಃ

**01.** ಈ ದಾವೆಯನ್ನು ನಾನು ನನಗೆ ವಯಸ್ಸಾಗಿದ್ದು ಪಾಲು ಬೇಕು ಎಂದು ಹಾಕಿರುತ್ತೇನೆ. ದಾವಾ ಆಸ್ತಿಗಳು ಮೂಲತಹವಾಗಿ ಕೋಗಳಿ ವಿರೋಬಣ್ಣರವರಿಗೆ ಸಂಬಧಪಟ್ಟದ್ದು. ದಾವಾ ಆಸ್ತೀಗಳು ಮೂಲತಹವಾಗಿ ಕೋಗಳಿ ವಿರೋಬಣ್ಣರವರ ಹೆಸರಿನಲ್ಲಿ ಇದ್ದವು ಎನ್ನುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಕೋಗಳಿ ವಿರೋಬಣ್ಣರವರು ನನಗೆ ನಮ್ಮ ತಂದೆಯ ತಂಗಿಯ ಗಂಡನಾಗಬೇಕು. ಕೋಗಳಿ ವಿರೋಬಣ್ಣರವರಿಗೆ ದಾವಾ ಆಸ್ತೀಗಳು ಹೇಗೆ ಬಂದವು ಎಂದರೆ ದಾವಾ ಆಸ್ತಿಗಳು ಕೋಗಳಿ ವಿರೋಬಣ್ಣರವರು ದುಡಿದಿರುವಂತಹ ಆಸ್ತೀಗಳು. ನನ್ನ ತಂದೆಯ ಹೆಸರು ವೀರಬಸಪ್ಪ. ದಾವಾ ಆಸ್ತೀಗಳಲ್ಲಿ **1** ಹೊಲ **4** ಎಕರೆ **70** ಸೆಂಟ್ಸ ಮಾತ್ರ ವೀರಬಸಪ್ಪರವರದ್ದು ಉಳಿದ ಎಲ್ಲಾ ಆಸ್ತೀಗಳು ಕೋಗಳಿ ಕೋಗಳಿ ವಿರೋಬಣ್ಣರವರದ್ದಾಗಿದೆ.

**02.** ದಾವಾ ಆಸ್ತೀಗಳು ಕೋಗಳಿ ವಿರೋಬಣ್ಣರವರ ಆಸ್ತೀಗಳು ಎಂದು ನನ್ನ ವಕೀಲರಿಗೆ ಮಾಹಿತಿಯನ್ನು ನೀಡಿರುವುದಿಲ್ಲ. ಕೋಗಳಿ ವಿರೋಬಣ್ಣರವರು ಇಬ್ಬರ ಹೆಸರಿನಲ್ಲಿ ವಿಲ್ಲನ್ನು ಮಾಡಿರುತ್ತಾರೆ. ಕೋಗಳಿ ವಿರೋಬಣ್ಣರವರು ನಿರ್ದಿಷ್ಟವಾಗಿ ಯಾವಾಗ ವಿಲ್ಲನ್ನು ಮಾಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಕೋಗಳಿ ವಿರೋಬಣ್ಣರವರು ಹಡಗಲಿ ಕೋರ್ಟ್ ಅಫಿಡವಿಟ್ ಮುಖಾಂತರ ವಿಲ್ಲನ್ನು ಮಾಡಿರುತ್ತಾರೆ. ಕೋಗಳಿ ವಿರೋಬಣ್ಣರವರು ಅವರೇ ಸ್ವಂತವಾಗಿ ನನ್ನ ಹೆಸರಿನಲ್ಲಿ ವಿಲ್ಲನ್ನು ಬರೆಸಿಕೊಟ್ಟಿರುವುದಿಲ್ಲ ಎಂದರೆ ಅವರೇ ಸ್ವ ಇಚ್ಛೆಯಿಂದ ಬರೆಯಿಸಿಕೊಟ್ಟಿರುತ್ತಾರೆ. ಸುಮಾರು **27** ವರ್ಷದ ಹಿಂದೆ ಕೋಗಳಿ ವಿರೋಬಣ್ಣರವರು ವಿಲ್ಲನ್ನು ಮಾಡಿರುತ್ತಾರೆ. ಈಟಿ ಶೇಖರಪ್ಪ ವಕೀಲರ ಮುಂದೆ ಕೋರ್ಟ್ ಅಫಿಡವಿಟ್ ಮಾಡಿಸಿರುತ್ತೇನೆ. ಅಫಿಡವಿಟನ್ನು ನ್ಯಾಯಾಧೀಶರು ಮಾಡಿರುತ್ತಾರೆ. ಸದರಿ ವಿಲ್ಲಿಗೆ ಕಾಟಿಹಳ್ಳಿ ವೀರಣ್ಣ ಮತ್ತು ಮೈಲಾರದವರು ಅವರ ಹೆಸರು ಗೊತ್ತಿರುವುದಿಲ್ಲ, ಈ ಇಬ್ಬರು ಸಾಕ್ಷಿಯಾಗಿ ವಿಲ್ಲಿಗೆ ಸಾಕ್ಷಿಯಾಗಿ ಸಹಿ

**ಮಾಡಿರುತ್ತಾರೆ. ಕಾಟಿಹಳ್ಳಿ ವೀರಣ್ಣ ಮತ್ತು ಮೈಲಾರದವರನ್ನು ನನ್ನ ಮಾವ ಕೋಗಳಿ ವಿಠೋಬಣ್ಣರವರು ಕರೆಸಿರುತ್ತಾರೆ.**

**ಈ ಹಂತದಲ್ಲಿ ಪಾಟೀ ಸವಾಲನ್ನು ಮುಂದುಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ

"ನನ್ನ ಸಮಕ್ಷಮ"

**Sd/-**

(ಶ್ರೀಮತಿ ಅಕ್ಷತಾ ಟಿ.)
ದಿವಾಣಿ ನ್ಯಾಯಾಧೀಶರು,
ಹಡಗಲಿ.